

ವಿಚಾರ ಎಲ್ಲಿ ಕೈಬಿಡುತ್ತದೋ ಎಂಬ ಅಳುಕಿನಿಂದಲೇ ಪ್ರಾರಂಭಿಸಬೇಕಾಗುತ್ತದೆ. ಪ್ರೊ. ಸಿ.ಕೆ. ವೆಂಕಟರಾಮಯ್ಯನವರ ರಾಜಭಕ್ತಿ ಹೇಗಿತ್ತೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ಅವರ ದೃಷ್ಟಿಯಲ್ಲಿ ಆಳಿದ ಮಹಾಸ್ವಾಮಿಗಳು, ಜಯಚಾಮರಾಜ ಒಡೆಯರ್ ಅವರು ಆಳುವ ಮಹಾಸ್ವಾಮಿಗಳು. ಕನ್ನಡದ ಕಣ್ವ, ಆಚಾರ್ಯ ಬಿ.ಎಂ. ಶ್ರೀಕಂಠಯ್ಯ ಅವರಿಗೆ ತಮ್ಮನ್ನು 'ರಾಜಸೇವಾಸಕ್ತ' ಎಂದು ಕರೆಸಿಕೊಳ್ಳುವುದರಲ್ಲೇ ಹೆಚ್ಚು ಆನಂದವಿತ್ತು. ಬೇರೆಯವರೂ ಹಾಗೆ ಸಂಬೋಧಿಸಬೇಕೆಂಬ ಇಚ್ಛೆ ಅವರದು. ಕನ್ನಡ ನಾಡನ್ನು 'ಚಿನ್ನದ ನಾಡದು ಮೈಸೂರು, ಗಂಧದ ಗುಡಿಯದು ಮೈಸೂರು, ನಾಲ್ವಡಿ ಕೃಷ್ಣನ ಮೈಸೂರು' ಎಂದವರು ಬಿಎಂಶ್ರೀ. ಮಹಾತ್ಮ ಗಾಂಧಿಯವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತ ಕಾಲದಲ್ಲಿ ಎರಡು ಬಾರಿ (1923 ಹಾಗೂ 1927ರಲ್ಲಿ) ಮೈಸೂರು ರಾಜ್ಯಕ್ಕೆ ಬಂದಿದ್ದರು. ಅನಾರೋಗ್ಯದಿಂದಾಗಿ ನಂದಿಬೆಟ್ಟದಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿದವರು ನಾಲ್ವಡಿಯವರೇ. ಗಾಂಧಿಯವರು 'ನವಜೀವನ' ಪತ್ರಿಕೆಯಲ್ಲಿ ಬರೆಯುತ್ತ – 'ಈ ಮಹಾರಾಜರು ನೂಲು ತೆಗೆಯುವುದರಲ್ಲಿ ನಿಪುಣರು' ಎಂದಿದ್ದರು. ಅವರ ಆಡಳಿತ ವೈಖರಿಯನ್ನು ನೋಡಿ 'ಮೈಸೂರು ರಾಜ್ಯ ರಾಮರಾಜ್ಯ' ಎಂದಿದ್ದರು. ಮಹಾರಾಜರನ್ನು 'ರಾಜರ್ಷಿ' ಎಂದು ಸಂಬೋಧಿಸಿದ್ದರು. 'ನಾನು ಹೋದಲ್ಲೆಲ್ಲ ಇವರ ಸಾಧನೆಯ ಬಗ್ಗೆಯೇ ಹೇಳುತ್ತೇನೆ' ಎಂದೂ ಹೇಳಿದರು. 1927ರಲ್ಲಿ ನಾಲ್ವಡಿ ಅವರ ಆಡಳಿತದ ಬೆಳ್ಳಿಹಬ್ಬದ ಆಚರಣೆ ನಾಡಿನುದ್ದಕ್ಕೂ ವಿಜೃಂಭಣೆಯಿಂದ ನಡೆಯಿತು. ರಸಋಷಿ

### ಕೆ.ಜಿ.ಎಫ್ ಚಿನ್ನದ ಗಣಿಗಳ ಕೊಡುಗೆ

ಕ್ರಿ.ಶ. 1880ರಿಂದ ಕೆ.ಜಿ.ಎಫ್ ಗಣಿಗಳು ಉತ್ಪಾದಿಸುತ್ತಿದ್ದ ಚಿನ್ನದ ಮೇಲೆ ಶೇ. 5 ಲಾಭಾಂಶವನ್ನು ಮೈಸೂರು ಸರ್ಕಾರಕ್ಕೆ ರಾಜಧನವಾಗಿ ಜಾನ್ ಟೇಲರ್ & ಸನ್ಸ್ ಕಂಪನಿ ನೀಡುತ್ತಿತ್ತು. ಕ್ರಿ.ಶ. 1910ರಿಂದ ಚಿನ್ನ ಮಾರಾಟ ತಂದ ಲಾಭಾಂಶದ ಮೇಲೆ ಶೇ. 2 ಕರವನ್ನು ಹೇರಲಾಯಿತು. ಎರಡನೇ ಮಹಾಯುದ್ಧದ ಬಿಸಿ ಚಿನ್ನದ ಬೆಲೆಯನ್ನು ಗಗನಕ್ಕೇರಿಸಿದಾಗ ಮೈಸೂರು ಸರ್ಕಾರ ಚಿನ್ನದ ಮೇಲೆ ಇನ್ನಷ್ಟು ಕರ ವಿಧಿಸಿತು. ಒಂದು ಔನ್ಸ್ ಬೆಲೆ 100 ರೂಪಾಯಿ ಮೀರಿದರೆ ಹೆಚ್ಚುವರಿ ಬೆಲೆಯ ಶೇ. 75 ಭಾಗ ರಾಜ್ಯದ ಬೊಕ್ಕಸ ತುಂಬುತ್ತಿತ್ತು. ಕ್ರಿ.ಶ. 1945ರಲ್ಲಿ ಚಿನ್ನದ ಬೆಲೆ ಒಂದು ಔನ್ಸ್‌ಗೆ 306 ರೂಪಾಯಿ ದಾಟಿತು. ಇದೂ ಕೂಡ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಹಣವನ್ನು ತುಂಬಿಸತೊಡಗಿತು. ಇಷ್ಟೊಂದು ಮೊತ್ತವನ್ನು ನೀಡುತ್ತಿದ್ದರೂ ಗಣಿ ಉದ್ಯಮ ಲಾಭದಾಯಕವಾಗಿ ನಡೆಯುತ್ತಿತ್ತು. ಜತೆಗೆ ಷೇರುದಾರರಿಗೆ ಅಧಿಕ ಪ್ರಮಾಣದ ಲಾಭಾಂಶವನ್ನೂ ನೀಡುತ್ತಿದ್ದವು. ಕ್ರಿ.ಶ. 1940ರಿಂದ ಕ್ರಿ.ಶ. 1955ರವರೆಗೆ ಚಿನ್ನದ ಮೇಲಿನ ಕರದಿಂದ ಮೈಸೂರು ಸರ್ಕಾರ 12.5 ಕೋಟಿ ರೂಪಾಯಿ ಪಡೆಯಿತು.

(ಕೋಲಾರ ಚಿನ್ನದ ಗಣಿಗಳು,
ಡಾ. ಎಂ. ವೆಂಕಟಸ್ವಾಮಿ, 2010, ಪು: 71)

